# SSLC MODEL QUESTION PAPER-2, 2019

## SUBJECT : II LANGUAGE KANNADA

**Time : 2.30hrs.** **Marks : 80**

### ಭಾಗ-ಎ

❖ ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8x1=8

1. ಅಸಿ-ಮಸಿ ಎಂದರೇನು ?
2. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?
3. ಗುರುಗಳು ಹೇಳಿದಂತೆ ಕಾಫಿ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳು ?
4. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ ?
5. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ?
6. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?
7. ವಿಷಯ ಬಾಣವು ಮರಕ್ಕೆ ಏಕೆ ತಗುಲಿತು ?
8. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?

❖ ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 11x2=22

9. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು ?
10. ಏಣಿ ಹೇಳಿಕೊಳ್ಳುವ ಕಷ್ಟಗಳೇನು ?
11. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು ?
12. ಕರ್ಪೂರದ ಕೆಲಸವೇನು ? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ ?
13. ಭಾವ ಬಣ್ಣದ ಸೀರೆಯನ್ನು ತಂದದ್ದು ಏಕೆ ?
14. ವೈದ್ಯರ ಯಾವ ಮಾತುಗಳು ಭೀಮನಾಯಕರ ಮನಸ್ಸನ್ನು ಚುಚ್ಚಿದವು ?
15. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳ ಬೇಕಿದೆ ?
16. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು ?
17. ಹಕ್ಕಿಗೂಡಿನ ವಿಶೇಷತೆಗಳೇನು ?
18. ಹೆಡ್‌ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ?
19. ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ ?

❖ ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ. 2x3=6

20. "ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು."
21. "ನಾಡ ನರಿಯವೊಲು ಹಲುಗಿರಿಯ ಬಿಡುವೆನೆ."

❖ ಈ ಕೆಳಗಿನ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6

22. ಬಸವರಾಜ ಸಬರದ
23. ರಮೇಶಗೌಡ ಎಂ.ಕೆ.

❖ ಈ ಕೆಳಗಿನ ಪದ್ಯಭಾಗವನ್ನು ಪೂರ್ಣ ಮಾಡಿ ಬರೆಯಿರಿ. 1x3=3

24. ಮರವಿದ್ದು ಫಲವೇನು.................
..................................
..................................
.................ಚೆನ್ನಮಲ್ಲಿಕಾರ್ಜುನ

ಅಥವಾ

ನೀರ ಕಂಡಲ್ಲಿ..............................
..........................................
..........................................
.....................ಕೂಡಲ ಸಂಗಮದೇವ.

2x4=8

❖ ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

25. ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ.

ಅಥವಾ

ಗೋಪಾಲ ಮತ್ತು ಬನದಗೋಪಾಲನ ನಡುವೆ ನಡೆದ ಸಂಭಾಷಣೆ ಏನು ?

26. ಗುರಿ ಪದ್ಯದ ಸಾರಾಂಶ ಬರೆಯಿರಿ.

ಅಥವಾ

ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ?

❖ ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4x1=4

ಭಾರತದ ಕ್ರಿಕೆಟ್ ಪಟು ಅನಿಲ್ ಕುಂಬ್ಳೆ ಅವರು 2008ರಲ್ಲಿ ಫಿರೋಜ್‌ಷಾಕೋಟ್ಲಾ ಮೈದಾನದಲ್ಲಿ ನಡೆದ ಪಂದ್ಯದ ಕೊನೆಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ಟೆಸ್ಟ್ ಜೀವನದ 18 ವರ್ಷಗಳ ಸಾಧನೆಯ ನಂತರ ನಿವೃತ್ತರಾದರು.

ಇವರು ಆಟದ ಅಂಗಳದಲ್ಲಿ ನಿವೃತ್ತರಾದ ಮೇಲೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾಯಿತ ಅಧ್ಯಕ್ಷರಾಗಿ ಕ್ರಿಕೆಟ್ ಎಂಬ ವಿಶಾಲ ಕ್ಷೇತ್ರದ ಸೇವೆಯಲ್ಲಿ ತೊಡಗಿದ್ದರು. ಅಲ್ಲದೆ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿದ್ದರು. ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯ ಮೂರನೆಯ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿಯೂ ಇವರದ್ದಾಗಿದೆ.

ಪ್ರಶ್ನೆಗಳು :

27. ಅನಿಲ್ ಕುಂಬ್ಳೆಯವರು ಯಾವ ಇಸವಿಯಲ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾದರು ?

28. ಅನಿಲ್‌ಕುಂಬ್ಳೆ ಅವರು ಎಷ್ಟು ವರ್ಷಗಳ ಕಾಲ ಟೆಸ್ಟ್ ಕ್ರಿಕೆಟ್ ಆಡಿದರು ?

29. ರಾಯಲ್ ಚಾಲೆಂಜರ್ಸ್ ಕ್ರಿಕೆಟ್ ತಂಡ ಯಾವ ನಗರಕ್ಕೆ ಸೇರಿದೆ ?

30. ಅನಿಲ್ ಕುಂಬ್ಳೆ ಅವರು ನಿವೃತ್ತರಾದ ನಂತರ ಯಾವ ಹುದ್ದೆಯನ್ನು ಅಲಂಕರಿಸಿದರು ?

## ಭಾಗ-ಬಿ

❖ ಈ ಕೆಳಗಿನ ಪ್ರತಿಯೊಂದು ಹೇಳಿಕೆಗೂ ತಲಾ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 12x1=12

31. ಪ್ರಬಲ ಪದದ ವಿರುದ್ಧಾರ್ಥಕ ಪದ

ಎ) ಬಲ ಬಿ) ನಿರ್ಬಲ ಸಿ) ದಬಲ ಡಿ) ದುರ್ಬಲ

32. 'ಪಂಡಿತ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆ.

ಎ) ಅಂಕಿತನಾಮ ಬಿ) ಅನ್ವರ್ಥನಾಮ ಸಿ) ರೂಢನಾಮ ಡಿ) ಸರ್ವನಾಮ

33. 'ಯೋಗಿ' ಪದದ ತದ್ಭವ ರೂಪವಿದು.

ಎ) ರೋಗಿ ಬಿ) ಭೋಗಿ ಸಿ) ರಾಗಿ ಡಿ) ಜೋಗಿ

34. 'ಅವನು' ಎಂಬುದು ಈ ರೀತಿಯ ಸರ್ವನಾಮವಾಗಿದೆ.

ಎ) ಪ್ರಥಮ ಪುರುಷ ಬಿ) ಉತ್ತಮ ಪುರುಷ ಸಿ) ಮಧ್ಯಮ ಪುರುಷ ಡಿ) ಅಧಮ ಪುರುಷ

35. 'ಮನೆಯಲ್ಲಿ' ಎಂಬುದು ಈ ವಿಭಕ್ತಿ ಪ್ರತ್ಯಯಕ್ಕೆ ಉದಾಹರಣೆ.

ಎ) ತೃತೀಯಾ ಬಿ) ಸಪ್ತಮೀ ಸಿ) ಚತುರ್ಥೀ ಡಿ) ಪಂಚಮೀ

36. 'ತಂಗಾಳಿ' ಪದವು ಈ ಸಮಾಸಕ್ಕೆ ಉದಾಹರಣೆ.

ಎ) ತತ್ಪುರುಷ ಬಿ) ದ್ವಿಗು ಸಿ) ದ್ವಂದ್ವ ಡಿ) ಕರ್ಮಧಾರಯ

37. 'ತುತ್ತತುದಿ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆ.

ಎ) ಜೋಡುನುಡಿ ಬಿ) ಅನುಕರಣಾವ್ಯಯ ಸಿ) ದ್ವಿರುಕ್ತಿ ಡಿ) ನುಡಿಗಟ್ಟು

38. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ

ಎ) ಎರಡು ಬಿ) ಐದು ಸಿ) ಒಂಬತ್ತು ಡಿ) ಹತ್ತು

39. 'ಓದುವನು' ಪದವು ಈ ಕಾಲಕ್ಕೆ ಉದಾಹರಣೆ.

ಎ) ಭೂತ ಬಿ) ಭವಿಷ್ಯತ್ ಸಿ) ವರ್ತಮಾನ ಡಿ) ಗತಕಾಲ

40. ತ್ರಿಪದಿಯಲ್ಲಿ ಇಷ್ಟು ಸಾಲುಗಳಿರುತ್ತವೆ.

ಎ) ಆರು ಬಿ) ಎರಡು ಸಿ) ನಾಲ್ಕು ಡಿ) ಮೂರು

41. 'ಬಿಕ್ಕು' ಪದದ ಅರ್ಥ

ಎ) ಅಳು ಬಿ) ನಗು ಸಿ) ಬೆಕ್ಕು ಡಿ) ಹಕ್ಕು

42. 'ಗಿರೀಂದ್ರ' ಎಂಬುದು ಈ ಸಂಧಿಗೆ ಉದಾಹರಣೆ.

ಎ) ಗುಣ ಬಿ) ಅನುನಾಸಿಕ ಸಿ) ಸವರ್ಣದೀರ್ಘ ಡಿ) ವೃದ್ಧಿ

## ಭಾಗ-ಸಿ

43. **ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** 1x3=3

* ದೇಶ ಸುತ್ತಬೇಕು. ಕೋಶ ಓದಬೇಕು.
* ಆತುರಗಾರನಿಗೆ ಬುದ್ಧಿ ಮಟ್ಟ
* ಮಾತು ಬೆಳ್ಳಿ ಮೌನ ಬಂಗಾರ

44. ನಿಮ್ಮನ್ನು ಜಯನಗರದ ಸರ್ಕಾರಿ ಪ್ರೌಢಶಾಲೆಯ 'ಶಾರದ' ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ನಡೆದ 'ಶಾಲಾ ವಾರ್ಷಿಕೋತ್ಸವ' ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯ ಕರ್ನಾಟಕ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ. 1x4=4

**ಅಥವಾ**

ನಿಮ್ಮನ್ನು ಗಿರಿನಗರದ ನಿವಾಸಿ 'ಪ್ರಶಾಂತ್' ಎಂದು ಭಾವಿಸಿಕೊಂಡು ನಿಮ್ಮ ಮನೆಯ ಗೃಹಪ್ರವೇಶ ಸಮಾರಂಭಕ್ಕೆ ಆಹ್ವಾನಿಸಿ ಉಡುಪಿಯಲ್ಲಿರುವ ನಿಮ್ಮ ಚಿಕ್ಕಪ್ಪ 'ರಂಗನಾಥ್' ಎಂಬುವವರಿಗೆ ಪತ್ರ ಬರೆಯಿರಿ.

1x4=4

45. ಇವುಗಳಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಪ್ರಬಂಧ ಬರೆಯಿರಿ.

* ಗ್ರಂಥಾಲಯ
* ಆರೋಗ್ಯ ಮತ್ತು ನೈರ್ಮಲ್ಯ
* ಸಮೂಹ ಮಾಧ್ಯಮಗಳು.

*****